

ಇದ್ದು ಸಿಕ್ಕಿ ಬಿದ್ದ. ಈ ಸೂಫಿಯನ್ನು ದಿಲ್ಲಿಯ ಪ್ರಸಿದ್ಧ ತಿಹಾರ್ ಜೈಲಿನಿಂದ ಹಿಡಿಯಲಾಗಿತ್ತು. ಮೊದಲು ಅವನ ಶಿಕ್ಷೆಯನ್ನು ಮಾಫಿ ಮಾಡಿಸಲಾಯಿತು. ಕೋಟ್ಯಂತರ ಡಾಲರ್ ಲಾಭ ಗಳಿಸುವ ಒಂದು ಕಾರ್ಪೊರೇಶನ್ ಅವನನ್ನು ಜನಹಿತ ಕೆಲಸದಲ್ಲಿ ತೊಡಗಿಸಲು ಬಯಸುತ್ತಿದೆ ಎಂದು ಅವನಿಗೆ ತಿಳಿಸಲಾಯಿತು.

ಜನಹಿತದ ಕೆಲಸ ಅಂದ್ರೇನು? ಸೂಫಿ ಕೇಳಿದ.

ಕಾರ್ಪೊರೇಶನ್ ತನ್ನ ವಿಶಾಲ ಫ್ಯಾಕ್ಟ್ರಿಯನ್ನು ಹಾಕಿದ ಸ್ಥಳದಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ, ಗಾಳಿ ಮಲಿನಗೊಂಡಿದೆ. ಮರ ಗಿಡಗಳು ಸುಟ್ಟು ಹೋಗಿವೆ, ಮಕ್ಕಳು ವಿಕಲಾಂಗರಾಗಿ ಹುಟ್ಟುತ್ತಾರೆ. ಅಲ್ಲಿಗೆ ಹೋಗಿ ಸಂತೋಷ, ತ್ಯಾಗ ಮತ್ತು ಬಲಿದಾನದ ಸಂದೇಶವನ್ನು ಕೊಡಬೇಕು.

ಸೂಫಿಗಳ ಬಗ್ಗೆ ಇಷ್ಟು ಪ್ರಮಾಣದಲ್ಲಿ ಚರ್ಚೆಯನ್ನು ಕೇಳಿದ ನಂತರ ಓರ್ವ ಸಜ್ಜನರು, ಹಿರಿಯ ಸೂಫಿಯೊಬ್ಬನನ್ನು ಹುಡುಕಿ ಅವನಿಂದ ಸೂಫಿಯಾಗುವ ಕಲೆಯನ್ನು ಕಲಿತು ಸೂಫಿಯಾಗಬೇಕು ಎಂದು ಯೋಚಿಸಿದರು. ಬಹಳಷ್ಟು ಹುಡುಕಾಡಿದ ನಂತರ ಆ ಸಜ್ಜನರಿಗೆ ಸೂಫಿಯಂತೂ ಸಿಗಲಿಲ್ಲ, ಆದರೆ ಸೂಫಿಯ ಒಂದು ಕಾಲಿನ ಚಪ್ಪಲಿ ಸಿಕ್ಕಿತು. ಎಷ್ಟು ಹುಡುಕಿದರೂ ಇನ್ನೊಂದು ಕಾಲಿನ ಚಪ್ಪಲಿ ಸಿಗಲಿಲ್ಲ, ಹೀಗಾಗಿ ನಿರಾಸೆಯಿಂದ ಒಂದೇ ಚಪ್ಪಲಿಯೊಂದಿಗೆ ಮನೆಗೆ ಬಂದರು. ಆದರೆ ಆ ಚಪ್ಪಲಿ ರಾತ್ರಿ ವೇಳೆಯಲ್ಲಿ ಮಾತನಾಡಲು ಪ್ರಾರಂಭಿಸಿತು. ಈಗ ಸೂಫಿಗಳಿಗೆ ಅತ್ಯಂತ ಉತ್ತಮ ಪ್ರೊಫೈಲನ್ನು ಅಮೆರಿಕದ ಡ್ರೆಸ್ ಡಿಜೈನರ್ ಪಾಪ್ ಜಕ್ಷೀಮ್ ಮಾಡ್ತಾನೆ, ನೀನು ಅವನ ಬಳಿಗೆ ಹೋಗು ಎಂದು ಚಪ್ಪಲಿ ಸಲಹೆ ನೀಡಿತು.

ಈ ಮಾತು ಕೇಳಿ ಸಜ್ಜನರು ಪ್ರಜ್ಞೆತಪ್ಪಿ ಬಿದ್ದರು. ಸೂಫಿಯ ಚಪ್ಪಲಿ ನಕ್ಕಿತು. ನಂತರ ಚಪ್ಪಲಿ ಸಜ್ಜನರ ಬುರುಡೆ ಮತ್ತು ಮುಖಕ್ಕೆ ಒಂದೇ ಸಮನೆ ಹೊಡೆಯಿತು. ಸಜ್ಜನರ ಮುಖ ಕೆಂಪಗಾಯಿತು. ಸ್ವಲ್ಪ ಹೊತ್ತಿನ ನಂತರ ಸಜ್ಜನರು ಕಣ್ಣುಗಳನ್ನು ತೆರೆದರು. ಆಗ ಅವರು ಪೂರ್ಣ ರೂಪದಲ್ಲಿ ಸೂಫಿಗಳಾಗಿದ್ದರು; ಆದರೆ ಅಲ್ಲಿ ಆ ಚಪ್ಪಲಿ ಇರಲಿಲ್ಲ.

ದೇಶದ ಅತ್ಯಂತ ದುಬಾರಿ ಡ್ರೆಸ್ ಡಿಜೈನರ್ ಸೂಫಿ ಕಾಸ್ಟ್ಯೂಮ್ ಡಿಜೈನ್ ಮಾಡಿದ. ನಾಲ್ಕು ಕಾರ್ಪೊರೇಶನ್‌ಗಳು ಗುಡ್ವಿಲ್ ಫಂಡಿಂಗ್ ಮಾಡಿದರು. ಇನ್ನು ನಿಮ್ಮ ಏರ್ ಲೈನ್‌ನ ಏರ್ ಹೋಸ್ಟೆಸ್ ಮುಂದಿನ ತಿಂಗಳಿನಿಂದ ಸೂಫಿ ಡ್ರೆಸ್‌ನಲ್ಲಿರುತ್ತಾರೆ ಎಂದು ಒಂದು ಏರ್ ಲೈನ್ ಹೇಳಿತು.

* * *

ಒಂದು ಸೆವೆನ್ ಸ್ಟಾರ್ ಹೋಟೇಲ್‌ನಲ್ಲಿ ಸೂಫಿ ಅಬ್ದುಲ್ ಕಯ್ಯೂಮ್ ಅಲಸಬಾ ಬೋಸ್ತಾನೆ ಬಹಶ್ತೆವಾರೆ ಸಕಿನೆ ತೂರಾನಿಯವರನ್ನು ಸೂಫಿ ಡ್ರೆಸ್ ಉದ್ಘಾಟನೆಗೆ ಕರೆಯಲಾಯಿತು. ಜಗಮಗಿಸುವ ದರ್ಬಾರ್ ಹಾಲ್‌ನಲ್ಲಿ ಅನೇಕ ದೇಶಗಳ ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಉಪಸ್ಥಿತರಿದ್ದರು. ಬಿಜಿನೆಸ್ ಮತ್ತು ಫ್ಯಾಶನ್ ಜಗತ್ತಿನ ಸ್ಟಾರ್‌ಗಳೆಲ್ಲರೂ ಅಲ್ಲಿದ್ದರು.

ಸೂಫಿ ಅಬ್ದುಲ್ ಕಯ್ಯೂಮ್ ಅಲಸಬಾ ಬೋಸ್ತಾನೆ ಬಹಶ್ತೆವಾರೆ ಸಕಿನೆ ತೂರಾನಿಯೊಂದಿಗೆ ಅನೇಕ ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಸೂಫಿ ಡ್ರೆಸ್ ಧರಿಸಿ ವೇದಿಕೆಗೆ ಬಂದರು.

ನಂತರ ಸೂಫಿ ಸಮೇತರಾಗಿ ಎಲ್ಲಾ ವಿ.ಐ.ಪಿ.ಗಳು ಬೆತ್ತಲಾಗಿ ಕಾಣಿಸುತ್ತಿರುವುದನ್ನು ಎಲ್ಲರೂ ನೋಡಿದರು. ವಿಷಯ ಸೂಫಿ ಕವನ ಮತ್ತು ಸೂಫಿ ಸಂಗೀತದಿಂದ ಹಾದು ಸೂಫಿ ಕಾಸ್ಟ್ಯೂಮ್, ಸೂಫಿ ಟೂರಿಸಮ್, ಸೂಫಿ ಫರ್ನಿಚರ್, ಸೂಫಿ ಡೆಕೋರ್, ಸೂಫಿ ಬಾಥ್ ರೂಮ್, ಸೂಫಿ ಫುಡ್, ಸೂಫಿ ಜ್ಯುವೆಲ್ಲರಿ, ಸೂಫಿ ಶೂ, ಸೂಫಿ ಅಂಡರ್‌ವೇರ್ ಮತ್ತು ಸೂಫಿ ಚಾಟ್ ಮಸಾಲೆಯವರೆಗೂ ಬಂದಾಗ ಸೂಫಿ ವಹೀಉದ್ದೀನ್ ವಲ್ದ್ ಸುಹೀದುದ್ದೀನ್ ವಲ್ದ್ ಕರೀಮುದ್ದೀನ್ರು ತಮ್ಮ ಮಗ ಟಾಮ್‌ಉದ್ದೀನನಿಗೆ ಹೇಳಿದರು 'ನೀನೀಗ ಸೂಫಿ ಶವವಸ್ತ್ರದ ಅಂಗಡಿಯನ್ನು ತೆರೆ'

'ಯಾಕೆ ಡ್ಯಾಡಿ?' ಮಗ ಟಾಮ್ ಉದ್ದೀನ್‌ಗೆ ಆಶ್ಚರ್ಯವಾಯಿತು.

ಈಗ ಉಳಿದಿರೋದು ಅದೊಂದೇ...ಆ ಕೆಲಸವನ್ನು ನಾವು ಮಾಡದಿದ್ದರೆ ಶವವಸ್ತ್ರ ಕಳ್ಳರು ಮಾಡ್ತಾರೆ. ಸುಮಾರು ಇನ್ನೂರು ವರ್ಷಗಳ ನಂತರ ಸೂಫಿ ಕದೀರರು ಮತ್ತೆ ಶರೀರ ಧಾರಣೆ ಮಾಡಿದಾಗ ಅವರಿಗೆ, ತಮ್ಮ ಗೋರಿ ಮೇಲೆ ಒಂದು ಭವ್ಯ ಸಮಾಧಿ ನಿರ್ಮಾಣಗೊಂಡಿರುವ ವಿಷಯ ತಿಳಿಯಿತು. ಸಮೀಪದಲ್ಲಿಯೇ ಒಂದು ವಿಶಾಲ ದರಗವಿದೆ. ಸಮಾಧಿಯ ಪರಿಸರದಲ್ಲಿಯೇ ಒಂದು ಫೈವ್ ಸ್ಟಾರ್ ಹೋಟೇಲ್ ಇದೆ. ಸಾವಿರಾರು ಜನರು ಸತ್ತವರ ಆತ್ಮ ಶಾಂತಿಗಾಗಿ ಕುರಾನ್ ಪಠಿಸಲು ಮತ್ತು ರಗ್ಗು ಹೊದಿಸಲು ಬರುತ್ತಾರೆ, ಲಕ್ಷಾಂತರ ರೂಪಾಯಿಗಳು ನಿತ್ಯ ಕಾಣಿಕೆ ರೂಪದಲ್ಲಿ ಬರುತ್ತದೆ. ಮುಂಬೈನ ಪ್ರತಿಯೊಬ್ಬ ಡಾನ್ ಮತ್ತು ಸಿನಿಮಾ ನಟ ಅವರನ್ನು ಪೂಜಿಸುತ್ತಾನೆ. ಇದನ್ನೆಲ್ಲಾ ತಿಳಿದು ಸೂಫಿ ಕದೀರರು ತುಂಬಾ ಖುಷಿಗೊಂಡರು. ಅವರು ತಮ್ಮ ಸಮಾಧಿ ಎದುರು ಮುಂದುವರೆದು ಹೋದಾಗ ಅವರಿಗೆ ಅತ್ತ ಕಡೆಯಿಂದ ಕೆಲವರು ಓಡೋಡಿ ಬರುತ್ತಿರುವುದು ಕಂಡಿತು. ಅವರು ಸೂಫಿ ಕದೀರರಿಗೆ ಹೇಳಿದರು, 'ಸಮಾಧಿ ಕಡೆಗೆ ಹೋಗ್ಬೇಡಿ'.

'ಯಾಕೆ?' ಸೂಫಿ ಕದೀರರು ಅವರನ್ನೇ ನೋಡಿದರು.

'ಅಲ್ಲಿ ಗುಂಡುಗಳನ್ನು ಹಾರಿಸಲಾಗುತ್ತಿದೆ'

ಅದನ್ನು ತಡೆಯುವ ಬದಲು ಸೂಫಿ ದರಗದೆಡೆಗೆ ಓಡಿದರು. ಪೊಲೀಸರ ಗುಂಡಿಗೆ ಪಾಪದ ವ್ಯಕ್ತಿ ಸತ್ತರೆ ಎಂಬ ಭಯ ಅವರಿಗೆ ಕಾಡಿತ್ತು.

ಅವರು ದರ್ಗಾ ಬಳಿಗೆ ಹೋದಾಗ, ಬಂದೂಕು ಹಿಡಿದವರ ಗುಂಪೊಂದು ಮಸೀದಿಯೊಳಗಿದೆ, ಇನ್ನೊಂದು ಹೊರಗಿದೆ, ಇಬ್ಬರ ನಡುವೆ ಗೋಲಿಬಾರ್ ನಡೆಯುತ್ತಿದೆ ಎಂಬುದನ್ನು ನೋಡಿದರು.

'ಒಬ್ಬರ ಜೀವವನ್ನು ಇನ್ನೊಬ್ಬರು ತೆಗೆಯುತ್ತಿದ್ದಾರಲ್ಲ, ಇವರ್ಯಾರು?'

ಸೂಫಿ ಯಾರನ್ನೋ ಕೇಳಿದರು.

'ಇವರು ಸೂಫಿ ಕದೀರನ ಮಕ್ಕಳು ಮರಿಗಳು...ಅವರ ವಂಶದವರು'

'ಇವರೇಕೆ ಹೊಡೆದಾಡುತ್ತಿದ್ದಾರೆ?'

'ದರ್ಗಾವನ್ನು ವಶಪಡಿಸಿಕೊಳ್ಳಲು'

'ವಶಪಡಿಸಿಕೊಳ್ಳಲು? ಯಾಕೆ?'

'ನೀವು ಹೊಸಬರಂತೆ ಕಾಣಿಸುತ್ತಿದ್ದೀರ...ಇಲ್ಲಿಂದ ನೀವು ಹೋಗಿ...ಇಲ್ಲದಿದ್ದಲ್ಲಿ ವ್ಯರ್ಥವಾಗಿ ಸಾಯ್ತೀರ'

ಆದರೆ ಸೂಫಿ ಕದೀರ್ ವೇಗವಾಗಿ ಸಮಾಧಿ ಕಡೆಗೆ ಹೆಜ್ಜೆ ಹಾಕಿದರು.

'ಏಯ್ ಮುದಿಯ ! ತೊಲಗು ಅಲ್ಲಿಂದ...ಎಲ್ಲಿಗೆ ಹೋಗ್ತಿದ್ದೀಯ?'

ನಾನು ಸೂಫಿ ಕದೀರ.

'ಹಾಗಾದ್ರೆ ನೀನು ನಮ್ಮ ಪರವೋ? ಅವರ ಪರವೋ?'

'ನಾನು ನನ್ನ ಪರ'

ಯುವಕರು ಅವರ ಮೇಲೆ ಗುಂಡಿನ ಮಳೆಗರೆದರು. ಸೂಫಿ ಕದೀರ್ ಮತ್ತೆ ಇನ್ನೂರು ವರ್ಷಗಳವರೆಗೆ ಸತ್ತರು.

* * *

ಸೂಫಿ ರಹಮಾನಿಯವರ ಬಳಿ ಸರ್ವಸ್ವವೂ ಇತ್ತು. ಹೆಸರಿತ್ತು. ಗೌರವವಿತ್ತು. ಪ್ರತಿಷ್ಠೆಯಿತ್ತು. ಆದರೆ ದುರದೃಷ್ಟವೆಂದರೆ ಮಕ್ಕಳಿರಲಿಲ್ಲ. ಮಕ್ಕಳು ಬದುಕುತ್ತಿರಲಿಲ್ಲ. ಅವರು ತುಂಬಾ ಚಿಂತಿತರಾದಾಗ ಒಂದು ದಿನ ಅವರ ಮಿತ್ರರು, ದೇಶದಲ್ಲಿ ಒಬ್ಬ ಮನುಷ್ಯನಿದ್ದಾನೆ, ಅವನ ಆಶೀರ್ವಾದದಿಂದ ನಿನ್ನ ಮಕ್ಕಳು ಬದುಕುತ್ತಾರೆ ಎಂದು ಸಲಹೆಯಿತ್ತರು.

ಯಾರು ಆ ಮನುಷ್ಯ? ಸೂಫಿ ಕೇಳಿದ.

ಅವರು ನಮ್ಮ ದೇಶದ ಪ್ರಧಾನ ಮಂತ್ರಿಗಳು.

ಅವರ ಆಶೀರ್ವಾದದಲ್ಲಿ ಅಷ್ಟು ಶಕ್ತಿ ಇದೆಯೇ?

ಹೌದು...ಅವರು ಬಯಸಿದರೆ ಸಾಧ್ಯ...

ಆದರೆ ಅವರನ್ನು ಭೇಟಿಯಾಗುವುದು ಸುಲಭವಲ್ಲ...

ಏನು ಮಾಡಬೇಕಾಗುತ್ತೆ?

ಅವರ ಮನೆ ಬಾಗಿಲವರೆಗೆ ನೀನು ತಲೆಯ ಮೇಲೆ ಕಾಲನ್ನಿಟ್ಟುಕೊಂಡು ಹೋಗ ಬೇಕಾಗುವುದು. ವಿಧಿಯಿಲ್ಲದೆ ಸೂಫಿ ಪ್ರಧಾನ ಮಂತ್ರಿಗಳ ಬಳಿಗೆ ಹೋದರು. ಅವರ ಆಶೀರ್ವಾದದಿಂದ ಮಗನೊಬ್ಬನ ಅಪ್ಪನಾದರು. ಸೂಫಿ ತಮ್ಮ ಮಗನಿಗೆ ಪ್ರಧಾನ ಮಂತ್ರಿಗಳ ಹೆಸರನ್ನಿಟ್ಟರು. ತಮ್ಮ ಮೇಲೆ ಯಾರ